# 2005

## CRIMINOLOGY

### Paper 1

*Time : 3 Hours ]* *[ Maximum Marks : 300*

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D.*

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

4×5=20

*Answer each question in not more than 50 words. Each question carries 5 marks.*

1. (a) "Statistics of crime and criminals are the most deceptive of all statistical data and they hardly present the factual crime position". — Examine this statement with reference to the statistical method of Criminology.

   (b) Collection and use of fingerprints in crime detection and identification of criminals was the first important breakthrough in the scientific investigation of crimes. — Comment.

   (c) Unsoundness of mind is a valid ground of defense under Section 84 of the Indian Penal Code. Examine the content and import of Section 84.

   (d) Confessions made by the accused to a Police Officer or made in Police custody are regarded as untrustworthy and, hence, they are inadmissible as evidence. When is such confession admissible ?

## ಭಾಗ A

*4×5=20*

*ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) "ಅಪರಾಧ ಮತ್ತು ಅಪರಾಧಿಗಳ ಸಾಂಖ್ಯಿಕತೆಯು ಬೇರೆಲ್ಲ ಸಾಂಖ್ಯಿಕ ದತ್ತಾಂಶಕ್ಕಿಂತ ವಂಚನೆಕಾರಿಯಾಗಿದೆ ಮತ್ತು ಇದು ವಾಸ್ತವ ಅಪರಾಧ ಸ್ಥಿತಿಯನ್ನು ತಿಳಿಸುವುದಿಲ್ಲ" — ಅಪರಾಧಶಾಸ್ತ್ರದ ಸಂಖ್ಯಾಶಾಸ್ತ್ರೀಯ ವಿಧಾನಕ್ಕೆ ಸಂಬಂಧಿಸಿದಂತೆ ಈ ಹೇಳಿಕೆಯನ್ನು ಪರಿಶೀಲಿಸಿ.

(ಬಿ) ಅಪರಾಧ ಪತ್ತೆ ಹಾಗೂ ಅಪರಾಧಿಗಳ ಗುರುತು ಹಚ್ಚುವಿಕೆಯಲ್ಲಿ ಬೆರಳಚ್ಚು ಗುರುತುಗಳ ಸಂಗ್ರಹ ಮತ್ತು ಬಳಕೆಯು, ಅಪರಾಧಗಳ ವೈಜ್ಞಾನಿಕ ತನಿಖೆಯ ಮೊದಲ ಬಹುಮುಖ್ಯ ಯಶಸ್ಸು. ಈ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

(ಸಿ) ಭಾರತೀಯ ದಂಡ ಸಂಹಿತೆಯ 84 ನೇ ಪರಿಚ್ಛೇದದ ಅನ್ವಯ, 'ಮಾನಸಿಕ ಅಸ್ವಸ್ಥತೆ' ಎಂಬುದು ಪ್ರತಿರಕ್ಷಣೆ ಪಡೆಯುವುದಕ್ಕೆ ಹೆಚ್ಚಿನ ಮಾನ್ಯತೆ ಪಡೆದ ಕಾರಣವಾಗಿದೆ. 84 ನೇ ಪರಿಚ್ಛೇದದಲ್ಲಿರುವುದೇನು ಮತ್ತು ಅದರ ಪ್ರಾಮುಖ್ಯತೆ ಏನು ಎಂಬ ಬಗ್ಗೆ ಬರೆಯಿರಿ.

(ಡಿ) ಒಬ್ಬ ಪೊಲೀಸ್ ಅಧಿಕಾರಿಯ ಮುಂದೆ ಅಥವಾ ಪೊಲೀಸ್ ಕಸ್ಟಡಿಯಲ್ಲಿ ಆರೋಪಿತನು ಮಾಡಿಕೊಂಡ ತಪ್ಪೊಪ್ಪಿಗೆಯು ನಂಬಲರ್ಹವಲ್ಲ ಎಂದು ಭಾವಿಸಲಾಗಿದೆ. ಆದ್ದರಿಂದ ಅದನ್ನು ಸಾಕ್ಷ್ಯವಾಗಿ ಮಾನ್ಯ ಮಾಡಲಾಗುವುದಿಲ್ಲ. ಆದರೆ ಯಾವ ಸಂದರ್ಭದಲ್ಲಿ ಇಂತಹ ತಪ್ಪೊಪ್ಪಿಗೆಗೆ ಮಾನ್ಯತೆ ಇರುತ್ತದೆ ?

[Turn over

## PART B

*10×10=100*

*Answer each question in not more than 100 words. Each question carries 10 marks.*

1. Elucidate and explain the hierarchy of criminal courts and the limits of their jurisdiction under the Criminal Procedure Code, 1973.

2. Firearms evidence pertaining to their identification through fired ammunition, is well established. Examine the sources that carry firearm evidence

3. Culpable homicide is the genus of which Murder is the species. Differentiate between 'Culpable homicide' and 'Murder'. Explain with the help of illustrations.

4. Victimology has become an important branch of criminal law. Examine the basic ideas and concerns of Victimology today.

5. Analyze and explain the evils of the capitalistic system that are conducive to the spread of criminal behaviour. Evaluate Bonger's Economic Theory of crime conviction.

6. Critically analyze the "Free will theory" of the Classical schools in the present society in the light of scientific development.

7. Explore and explain the definition of crime in all its aspects with illustrations.

8. Examine the contribution made by Enrico Ferri towards crime causation and classification of criminals.

9. Explain the concept of 'Multiple factors approach' propounded by sociologists to explain crime causation.

10. The detection of poisons and their identification are an important aspect of forensic science. Mention in detail the symptoms and classical identification techniques in case of administration of poison.

## ಭಾಗ B

*10×10=100*

*ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ. ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

1. ಕ್ರಿಮಿನಲ್ ನ್ಯಾಯಾಲಯಗಳ ಶ್ರೇಣೀಕರಣವನ್ನು ವಿವರಿಸಿ ಮತ್ತು 1973 ರ ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಇವುಗಳ ಅಧಿಕಾರ ವ್ಯಾಪ್ತಿಯ ಮಿತಿಗಳೇನು ಎಂಬುದನ್ನು ನಿರೂಪಿಸಿ.

2. ಉಪಯೋಗಿಸಲಾದ ಮದ್ದುಗುಂಡುಗಳ ಮೂಲಕ ಬಂದೂಕು-ತುಪಾಕಿಗಳನ್ನು ಪತ್ತೆಹಚ್ಚುವ ಸಾಕ್ಷ್ಯವು ಚೆನ್ನಾಗಿ ಸ್ಥಾಪಿತವಾಗಿದೆ. ಇವುಗಳ ಸಾಕ್ಷ್ಯಕ್ಕೆ ಮಾಹಿತಿ ಒದಗಿಸುವ ಅಂಶಗಳು ಯಾವುವು ? ಪರಿಶೀಲಿಸಿ.

3. 'ಕೊಲೆ'ಯು 'ಅಪರಾಧಿಕ ನರಹತ್ಯೆ' ಎಂಬ ಜಾತಿಯ ಒಂದು ಪ್ರಭೇದ. ಅಪರಾಧಿಕ ನರಹತ್ಯೆ ಮತ್ತು ಕೊಲೆ ಇವುಗಳ ವ್ಯತ್ಯಾಸವೇನು ? ಇದನ್ನು ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸಿ.

4. 'ವಿಕ್ಟಿಮಾಲಜಿ' (ಅಪರಾಧಕ್ಕೆ ಗುರಿಯಾದವರ ಶಾಸ್ತ್ರ) ಎಂಬುದು, ಕ್ರಿಮಿನಲ್ ಕಾನೂನಿನ ಬಹು ಮುಖ್ಯ ಶಾಖೆ. ಇಂದಿನ ಸಂದರ್ಭದಲ್ಲಿ ಇದರ ಮೂಲ ವಿಚಾರಗಳು ಮತ್ತು ಕಾಳಜಿಗಳನ್ನು ಕುರಿತು ಬರೆಯಿರಿ.

5. ಅಪರಾಧಿಕ ವರ್ತನೆಯು ಹೆಚ್ಚಾಗಿ ವ್ಯಾಪಿಸುವುದಕ್ಕೆ ಕಾರಣವಾಗಿರುವ ಬಂಡವಾಳಶಾಹಿಯ ವ್ಯವಸ್ಥೆಯ ಅನಿಷ್ಟಗಳನ್ನು ವಿವರಿಸಿ ಮತ್ತು ವಿಶ್ಲೇಷಿಸಿ. ಹಾಗೂ, ಅಪರಾಧ ನಿರ್ಣಯ ಕುರಿತ ಬೋಂಗರ್‌ನ ಆರ್ಥಿಕ ಸಿದ್ಧಾಂತದ ಮೌಲ್ಯಮಾಪನ ಮಾಡಿ.

6. ಇಂದಿನ ಸಮಾಜದಲ್ಲಿ, ವೈಜ್ಞಾನಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಮಾರ್ಗೀಯ ಸಿದ್ಧಾಂತಕಾರರ ಇಚ್ಛಾಸ್ವಾತಂತ್ರ್ಯ ಸಿದ್ಧಾಂತ (Free-will Theory) ವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

7. ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು 'ಅಪರಾಧ'ದ ಪರಿಭಾಷೆಯನ್ನು ಸೋದಾಹರಣವಾಗಿ ವಿವರಿಸಿ.

8. ಅಪರಾಧದ ಕಾರಣಗಳು ಮತ್ತು ಅಪರಾಧಿಗಳ ವರ್ಗೀಕರಣಕ್ಕೆ ಎನ್ರಿಕೊ ಫೆರಿಯ ಕೊಡುಗೆಯನ್ನು ಪರಿಶೀಲಿಸಿ.

9. ಅಪರಾಧದ ಕಾರಣಗಳನ್ನು ವಿವರಿಸುವುದಕ್ಕಾಗಿ ಸಮಾಜಶಾಸ್ತ್ರಜ್ಞರು ಪ್ರತಿಪಾದಿಸಿರುವ ಬಹುಮುಖೀ ಅಂಶಗಳ ಪರಿಕಲ್ಪನೆಯನ್ನು ವಿವರಿಸಿ.

10. ವಿಷವನ್ನು ಪತ್ತೆ ಮಾಡುವುದು ಮತ್ತು ಅದು ಯಾವುದೆಂದು ಗುರುತು ಹಚ್ಚುವುದು ನ್ಯಾಯಸಂಬಂಧಿ ವಿಜ್ಞಾನ (ಫೊರೆನ್ಸಿಕ್ ವಿಜ್ಞಾನ) ದ ಬಹುಮುಖ್ಯ ಅಂಶ. ವಿಷಪ್ರಾಶನ ಪ್ರಕರಣಗಳಲ್ಲಿ ಕಂಡುಬರುವ ಲಕ್ಷಣಗಳು ಮತ್ತು ಅವುಗಳನ್ನು ಶಾಸ್ತ್ರೀಯವಾಗಿ ಗುರುತುಹಚ್ಚುವ ತಂತ್ರಗಳನ್ನು ಸವಿವರವಾಗಿ ತಿಳಿಸಿ.

## PART C

*6×15=90*

*Answer each question in not more than 150 words. Each question carries 15 marks.*

**1.** Criminals organize themselves into formal and informal associations to carry on their illegal activities violating the law. Examine various kinds of organized crimes with present day illustrations.

**2.** Discuss in detail the importance and scope of Criminology and the inter-relationship between Criminology and other related socil sciences.

**3.** Evaluation of blood evidence requires blood samples from the victim and the suspect. Discuss in detail the procedures and precautions for the collection and evaluation of blood for the purpose of evidence.

**4.** Discuss and evaluate the changes introduced by the Criminal law (Amendment) Act, 1983 and the role played by the Judiciary in protecting rape victims

**5.** "*Actus non facit reum nisi mens sit rea*" is the basis of criminal liability. Discuss the various components of this maxim in constituting an act into a crime.

**6.** A corpse helps to establish *corpus delicti*. It gives the identity of the deceased, the time of death and the cause of death, and also furnishes clues which link the criminal with the crime. Examine the various signs of death and time of death as specified in Forensic Science.

## ಭಾಗ C

*6×15=90*

*ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ. ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

1. ಕಾನೂನನ್ನು ಉಲ್ಲಂಘಿಸಿ, ತಮ್ಮ ಅಕ್ರಮ ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಅಪರಾಧಿಗಳು ಔಪಚಾರಿಕ ಹಾಗೂ ಅನೌಪಚಾರಿಕವಾದ ಸಂಘಟನೆಗಳನ್ನು ಮಾಡಿಕೊಂಡಿರುತ್ತಾರೆ. ಇಂದಿನ ಸಂದರ್ಭದ ಉದಾಹರಣೆಗಳೊಂದಿಗೆ ಇಂತಹ ವಿವಿಧ ರೀತಿಯ ಸಂಘಟಿತ ಅಪರಾಧಗಳನ್ನು ಪರಿಶೀಲಿಸಿ.

2. ಅಪರಾಧ ಶಾಸ್ತ್ರದ ಪ್ರಾಮುಖ್ಯತೆ ಮತ್ತು ವ್ಯಾಪ್ತಿ ಕುರಿತು ವಿವರವಾಗಿ ಚರ್ಚಿಸಿ. ಅಪರಾಧ ಶಾಸ್ತ್ರ ಹಾಗೂ ಸಂಬಂಧಪಟ್ಟ ಇತರ ಸಮಾಜ ವಿಜ್ಞಾನಗಳೊಂದಿಗೆ ಅದರ ಅಂತರ್ ಸಂಬಂಧವನ್ನು ಕುರಿತು ಬರೆಯಿರಿ.

3. ರಕ್ತದ ಸಾಕ್ಷ್ಯ ಕುರಿತು ಮೌಲ್ಯಮಾಪನ ಮಾಡಬೇಕಾದರೆ ಬಲಿಯಾದ ವ್ಯಕ್ತಿ ಮತ್ತು ಅನುಮಾನಿತ ವ್ಯಕ್ತಿ ಇವರಿಬ್ಬರ ರಕ್ತದ ಮಾದರಿಗಳೂ ಅಗತ್ಯ. ಸಾಕ್ಷ್ಯದ ಉದ್ದೇಶಕ್ಕಾಗಿ ರಕ್ತವನ್ನು ಸಂಗ್ರಹಿಸುವುದು ಮತ್ತು ಮೌಲ್ಯಮಾಪನ ಮಾಡುವುದಕ್ಕೆ ಸಂಬಂಧಿಸಿದ ವಿಧಾನಗಳು ಹಾಗೂ ವಹಿಸಬೇಕಾದ ಮುನ್ನೆಚ್ಚರಿಕೆಗಳ ಬಗ್ಗೆ ವಿವರವಾಗಿ ಚರ್ಚಿಸಿ.

4. ಅತ್ಯಾಚಾರಕ್ಕೆ ಬಲಿಯಾದ ವ್ಯಕ್ತಿಗಳ ರಕ್ಷಣೆಗೆ ಸಂಬಂಧಿಸಿದಂತೆ ಅಪರಾಧ ಕಾನೂನು (ತಿದ್ದುಪಡಿ) ಕಾಯಿದೆ, 1983, ಜಾರಿಗೆ ತಂದ ಬದಲಾವಣೆಗಳು ಮತ್ತು ನ್ಯಾಯಾಂಗವು ಈ ಬಗ್ಗೆ ವಹಿಸುತ್ತಿರುವ ಪಾತ್ರ ಕುರಿತು ಚರ್ಚಿಸಿ ಮತ್ತು ಮೌಲ್ಯಮಾಪನ ಮಾಡಿ.

5. ಅಪರಾಧಿಕ ಉದ್ದೇಶವಿರದ ಯಾವ ಕಾರ್ಯವೂ 'ಅಪರಾಧ' ಎನಿಸುವುದಿಲ್ಲ - ಇದು ಅಪರಾಧ ಹೊಣೆಗಾರಿಕೆಯ ಮೂಲ ತತ್ವ. ಒಂದು ಕೃತ್ಯವನ್ನು 'ಅಪರಾಧ' ಎಂದು ರೂಪಿಸುವಲ್ಲಿ ಈ ಸೂತ್ರವಾಕ್ಯವು ಪರಿಗಣಿಸುವ ವಿವಿಧ ಅಂಶಗಳನ್ನು ಕುರಿತು ಚರ್ಚಿಸಿ.

6. ಅಪರಾಧದ ಸಂಗತಿಯನ್ನು ನಿರ್ಣಯಿಸಲು ಹೆಣವು ಸಹಾಯ ಮಾಡುತ್ತದೆ. ಅದು ಮೃತ ವ್ಯಕ್ತಿ ಯಾರು, ಮರಣಿಸಿದ ಸಮಯ ಯಾವುದು, ಮರಣಕ್ಕೆ ಕಾರಣವೇನು ಎಂಬುದನ್ನು ತಿಳಿಸುತ್ತದೆ ಮತ್ತು ಅಪರಾಧಕ್ಕೂ ಅಪರಾಧಿಗೂ ಸಂಬಂಧ ಕಲ್ಪಿಸುವಂಥ ಸುಳಿವುಗಳನ್ನು ಒದಗಿಸುತ್ತದೆ. ನ್ಯಾಯ ಸಂಬಂಧ ವಿಜ್ಞಾನದಲ್ಲಿ ಮರಣದ ವಿವಿಧ ಚಿಹ್ನೆಗಳ ಬಗ್ಗೆ ಮತ್ತು ಮರಣದ ಸಮಯದ ಬಗ್ಗೆ ಏನು ಹೇಳಲಾಗಿದೆ ಎಂಬುದನ್ನು ಪರಿಶೀಲಿಸಿ.

## PART D

*3×30=90*

*Answer any* ***three*** *of the following questions, each in not more than 300 words. Each question carries 30 marks.*

1. Financial loss to society from 'white collar' crimes is greater than the financial loss from traditional crimes. Discuss, with suitable illustrations the growth of, reasons for and the measures to control white collar crimes.

2. Positive schools of Criminology emerged due to co-relationship between criminality and the structure and functioning of the brain. Discuss in detail the positive schools of Criminology and the criticisms against such schools of thought.

3. Forgery may be done by copying an available model. The model may be in the mind of the culprit. Examine and discuss in detail the various kinds of forgery, with illustrations.

4. Examine in detail the powers held and the problems faced by the Police in respect of arrest, search and seizure of the accused person. Mention the changes recommended by the Malimath Committee Report in this regard.

5. With the help of judicial pronouncements, critically analyse the essential elements of kidnapping from lawful guardianship. Distinguish between 'Kidnapping' and 'Abduction'.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿಯೊಂದು ಪ್ರಶ್ನೆಗೂ 30 ಅಂಕಗಳು.*

**1.** ಸಾಂಪ್ರದಾಯಕವಾದ ಅಪರಾಧಗಳಿಗಿಂತ ಮೇಲು ಸ್ತರದವರು ಮಾಡುವ ಅಪರಾಧಗಳಿಂದ ಸಮಾಜಕ್ಕೆ ಹೆಚ್ಚಿನ ಆರ್ಥಿಕ ನಷ್ಟವಾಗುತ್ತದೆ. ಇಂತಹ ದೊಡ್ಡವರೆನಿಸಿಕೊಂಡವರ ಅಪರಾಧಗಳ ಬೆಳವಣಿಗೆ, ಅದರ ಕಾರಣಗಳು ಮತ್ತು ಅವುಗಳನ್ನು ನಿಯಂತ್ರಿಸುವುದಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ಸೂಕ್ತ ಉದಾಹರಣೆಗಳೊಂದಿಗೆ ಚರ್ಚಿಸಿ.

**2.** ಅಪರಾಧಕತೆ ಮತ್ತು ಮಿದುಳಿನ ರಚನೆ ಹಾಗೂ ಕಾರ್ಯಗಳ ನಡುವಿನ ಪರಸ್ಪರ ಸಂಬಂಧದಿಂದ ಅಪರಾಧ ಶಾಸ್ತ್ರದ ಇತ್ಯಾತ್ಮಕ ಪ್ರಸ್ಥಾನಗಳು ಉಗಮಿಸಿದವು. ಅಪರಾಧ ಶಾಸ್ತ್ರದ ಇತ್ಯಾತ್ಮಕ ಪ್ರಸ್ಥಾನಗಳನ್ನು ಕುರಿತು ವಿವರವಾಗಿ ಚರ್ಚಿಸಿ ಮತ್ತು ಇಂತಹ ಆಲೋಚನಾ ವಿಧಾನವನ್ನು ಕುರಿತ ಟೀಕೆಗಳ ಬಗ್ಗೆ ಬರೆಯಿರಿ.

**3.** ಲಭ್ಯವಿರುವ ಮಾದರಿಯನ್ನು ನಕಲು ಮಾಡುವ ಮೂಲಕ ಫೋರ್ಜರಿ ಮಾಡಬಹುದು. ಈ ಮಾದರಿಯು ತಪ್ಪಿತಸ್ಥನ ಮನಸ್ಸಿನಲ್ಲೆ ಇರಬಹುದು. ವಿವಿಧ ರೀತಿಯ ಫೋರ್ಜರಿಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ.

**4.** ಆರೋಪಿತ ವ್ಯಕ್ತಿಯ ಬಂಧನ, ಶೋಧನೆ ಮತ್ತು ವಶಪಡಿಸಿಕೊಳ್ಳುವಿಕೆಗೆ ಸಂಬಂಧಿಸಿದಂತೆ ಪೋಲೀಸರಿಗೆ ಇರುವ ಅಧಿಕಾರಗಳು ಮತ್ತು ಅವರು ಎದುರುಗೊಳ್ಳುವ ಸಮಸ್ಯೆಗಳನ್ನು ವಿವರವಾಗಿ ಪರಿಶೀಲಿಸಿ. ಈ ಸಂಬಂಧವಾಗಿ ಮಳೀಮಠ್ ಸಮಿತಿಯು ಯಾವ ಬದಲಾವಣೆಗಳನ್ನು ಶಿಫಾರಸು ಮಾಡಿದೆ ಎಂಬುದನ್ನು ತಿಳಿಸಿ.

**5.** ಕಾನೂನುಬದ್ಧ ವಾರಸುದಾರಿಕೆಯಿಂದ ವ್ಯಪಹರಣವನ್ನು ಮಾಡುವುದರ ಲಕ್ಷಣಗಳು ಯಾವುವು ಎಂಬುದನ್ನು ನ್ಯಾಯಾಂಗದ ತೀರ್ಪುಗಳ ಉದಾಹರಣೆಗಳೊಂದಿಗೆ ವಿಮರ್ಶಾತ್ಮಕವಾಗಿ ಬರೆಯಿರಿ. 'ವ್ಯಪಹರಣ (Kidnapping)' ಮತ್ತು 'ಅಪಹರಣ (Abduction)' ಗಳಿಗೆ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಿ.

07/2

# 2005

2717
3 pm

## CRIMINOLOGY

### Paper 2

*Time : 3 Hours ]* *[ Maximum Marks : 300*

### INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory***.*
*Answer any* **three** *questions in Part D.*

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in not more than 50 words. Each question carries 5 marks.*

1. (a) Critically evaluate the preventive and punitive legal enactments/provisions to curb the menace of communal violence in India.

   (b) "Parole is the release of an offender from the prison before the expiration of the term of imprisonment" — Evaluate the concept and working of Parole in India

   (c) Critically analyze and discuss the individual and environmental oriented crime prevention programmes.

   (d) "A radical feature of the new prison philosophy is the emergence of open prisons in many parts of India". — Disucss the need and importance of open prisons system.

## PART B

*10×10=100*

*Answer each question in not more than 100 words. Each question carries 10 marks.*

1. Police functioning was changed from aggressive and mailed fist attitude to peaceful and persuasive handling of agitating groups. — Discuss.

2. "Lack of affection is regarded as an important contributory factor in anti-social attitude. Strained family relations are responsible for crime and delinquency." — Discuss in detail.

3. Constitutional rights of prisoners are re-interpreted by the Judiciary from time to time. — Evaluate the statement with illustrations.

4. Critically analyze the Probation of Offenders Act, 1958 as a corrective legislation and evaluate the results of such probation work in India.

5. Mass media has contributed substantially in increasing the types and incidence of crime in India. — Comment.

6. Explain in detail organic psychosis and different functional psychosis.

7. When all the sources of gratification fail due to defects of persons or circumstances, prostitution can be relied upon to furnish relief. Examine the causes of prostitution, consequent harm and the legal response to control prostitution.

8. Pornography, especially pornography through the cyber media, has become a new fad with modern urban youth. — Discuss.

9. Discuss the importance of photographic documentation as evidence and the basic methods of such documentation.

10. Homosexuality, as a kind of unnatural offence punishable under the IPC, has become a frequent crime among modern youth. — Comment.

## ಭಾಗ A

*4×5=20*

*ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಭಾರತದಲ್ಲಿ ಕೋಮು ಹಿಂಸೆಯ ಬೆದರಿಕೆಯನ್ನು ತಡೆಗಟ್ಟುವುದಕ್ಕಾಗಿ ಇರುವಂಥ ಪ್ರತಿಬಂಧಕ ಹಾಗೂ ದಂಡನಾತ್ಮಕ ಅಧಿನಿಯಮಗಳು / ಉಪಬಂಧಗಳನ್ನು ಕುರಿತು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

(ಬಿ) "ಪೆರೋಲ್" ಎಂದರೆ ಸೆರೆಮನೆವಾಸದ ಅವಧಿ ಮುಗಿಯುವುದಕ್ಕೆ ಮೊದಲೇ ತಪ್ಪಿತಸ್ಥನನ್ನು ಸೆರೆಮನೆಯಿಂದ ಬಿಡುಗಡೆ ಮಾಡುವುದು. ಭಾರತದಲ್ಲಿ ಪೆರೋಲ್ ಎಂಬುದರ ಪರಿಕಲ್ಪನೆ ಹಾಗೂ ಅದು ಕಾರ್ಯ ನಿರ್ವಹಿಸುವ ರೀತಿ ಕುರಿತು ವಿಮರ್ಶಿಸಿ.

(ಸಿ) ವ್ಯಕ್ತಿ ಹಾಗೂ ಪರಿಸರ ಕೇಂದ್ರಿತವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಪ್ರತಿಬಂಧಕ ಕಾರ್ಯಕ್ರಮಗಳ ಬಗ್ಗೆ ವಿಶ್ಲೇಷಿಸಿ.

(ಡಿ) ಹೊಸ ಕಾರಾಗೃಹ ತತ್ವವು ಜಾರಿಗೆ ತಂದ ತೀವ್ರ ಸುಧಾರಣಾ ಅಂಶ ಯಾವುದೆಂದರೆ, ಭಾರತದ ಅನೇಕ ಭಾಗಗಳಲ್ಲಿ "ಬಯಲು ಬಂದೀಖಾನೆಗಳ ಉಗಮ". — ಬಯಲು ಬಂದೀಖಾನೆಗಳ ಅಗತ್ಯತೆ ಮತ್ತು ಪ್ರಾಮುಖ್ಯತೆ ಕುರಿತು ಚರ್ಚಿಸಿ.

## ಭಾಗ B

*10×10=100*

*ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ. ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

1. ಪ್ರತಿಘಟನಕಾರ ಗುಂಪುಗಳಿಗೆ ಸಂಬಂಧಿಸಿದಂತೆ ಪೊಲೀಸ್ ಕಾರ್ಯಾಚರಣೆಯು, ಆಕ್ರಮಣಕಾರಿ ಮತ್ತು ಮುಷ್ಟಿಬಲ ಧೋರಣೆಯಿಂದ ಶಾಂತಿಯುತವಾದ ಹಾಗೂ ಮನವೊಲಿಕೆಯ ರೀತಿಗೆ ಬದಲಾಗಿದೆ. - ಚರ್ಚಿಸಿ.

2. "ಸಮಾಜವಿರೋಧಿ ಮನೋಭಾವ ರೂಪುಗೊಳ್ಳುವುದಕ್ಕೆ ವಾತ್ಸಲ್ಯ ಪ್ರೀತಿಗಳ ಕೊರತೆಯೇ ಮುಖ್ಯ ಕಾರಣ. ಅಕ್ರಮ ಮತ್ತು ಅಪರಾಧಗಳಿಗೆ ವಿಷಮ ಕೌಟುಂಬಿಕ ಸಂಬಂಧಗಳು ಕಾರಣ." — ಈ ಬಗ್ಗೆ ಚರ್ಚಿಸಿ.

3. ಖೈದಿಗಳ ಸಂವಿಧಾನಾತ್ಮಕ ಹಕ್ಕುಗಳನ್ನು ನ್ಯಾಯಾಂಗವು ಕಾಲಾನುಕಾಲಕ್ಕೆ ಮರುವ್ಯಾಖ್ಯಾನಿಸುತ್ತ ಬಂದಿದೆ. - ಈ ಹೇಳಿಕೆಯನ್ನು ಸೋದಾಹರಣವಾಗಿ ವಿಮರ್ಶಿಸಿ.

4. ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958 ಇದು ಒಂದು ಸರಿಪಡಿಕೆ ಶಾಸನವಾಗಿದೆ ಎಂಬುದನ್ನು ಕೂಲಂಕಷವಾಗಿ ವಿಶ್ಲೇಷಿಸಿ. ಭಾರತದಲ್ಲಿ ಇಂತಹ ಪರಿವೀಕ್ಷಣಾ ಕಾರ್ಯದಿಂದ ಕಂಡುಬಂದ ಫಲಿತಾಂಶಗಳನ್ನು ಪರಿಶೀಲಿಸಿ.

5. ಭಾರತದಲ್ಲಿ, ಸಮೂಹ ಮಾಧ್ಯಮವು ಅಪರಾಧದ ಬಗೆಗಳು ಮತ್ತು ಘಟನೆಗಳು ಹೆಚ್ಚಾಗುವದಕ್ಕೆ ಗಣನೀಯ ಕೊಡುಗೆ ನೀಡಿದೆ. — ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

6. ಸೇಂದ್ರಿಯ ಮನೋವಿಕ್ಷಿಪ್ತಿ (Organic Psychosis) ಮತ್ತು ಕಾರ್ಯಾತ್ಮಕ ಮನೋವಿಕ್ಷಿಪ್ತಿಗಳ (Functional Psychosis) ಬಗ್ಗೆ ವಿವರವಾಗಿ ಬರೆಯಿರಿ.

7. ವ್ಯಕ್ತಿಗಳ ನ್ಯೂನತೆ ಅಥವಾ ಸನ್ನಿವೇಶಗಳ ಕಾರಣದಿಂದಾಗಿ ಇಚ್ಛಾತೃಪ್ತಿಯ ಎಲ್ಲ ವಿಧಾನಗಳೂ ವಿಫಲವಾದನಂತರ ಪರಿಹಾರಕ್ಕಾಗಿ ವೇಶ್ಯಾವೃತ್ತಿಯ ಮೊರೆ ಹೋಗಬಹುದು. ವೇಶ್ಯಾವೃತ್ತಿಗೆ ಕಾರಣಗಳೇನು ? ಇದರಿಂದಾಗುವ ಹಾನಿಗಳು ಯಾವುವು ಮತ್ತು ವೇಶ್ಯಾವೃತ್ತಿಯ ನಿಯಂತ್ರಣಕ್ಕಾಗಿ ಕಾನೂನು ಹೇಗೆ ಸ್ಪಂದಿಸಿದೆ ? ಪರಿಶೀಲಿಸಿ.

8. ಅಶ್ಲೀಲತೆ, ಅದರಲ್ಲಿಯೂ ಸೈಬರ್ ಮಾಧ್ಯಮದ ಮೂಲಕ ಅಶ್ಲೀಲತಾ ಕಾರ್ಯ ಚಟುವಟಿಕೆ, ಆಧುನಿಕ ಯುವಜನತೆಯ ಹೊಸ ಚಾಳಿಯಾಗಿದೆ. — ಚರ್ಚಿಸಿ.

9. ಸಾಕ್ಷ್ಯಾಧಾರವಾಗಿ ಛಾಯಾಚಿತ್ರ ದಾಖಲಾತಿಯ ಪ್ರಾಮುಖ್ಯತೆ ಮತ್ತು ಇಂತಹ ದಾಖಲಾತಿಯ ಮೂಲವಿಧಾನಗಳ ಬಗ್ಗೆ ಬರೆಯಿರಿ.

10. ಅಸ್ವಾಭಾವಿಕ ವರ್ತನೆ ಎಂದು ಭಾರತೀಯ ದಂಡ ಸಂಹಿತೆಯ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುವ ಸಲಿಂಗ ಕಾಮಕ್ಕೆ ಸಂಬಂಧಿಸಿದ ಅಪರಾಧವು ಆಧುನಿಕ ಯುವಜನರಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. - ವಿಮರ್ಶಿಸಿ.

## PART C

*6×15=90*

*Answer each question in not more than 150 words. Each question carries 15 marks.*

1. 'Attempt to commit suicide is not violative of Art. 21 of the Constitution.' — Explain the statement with the help of judicial pronouncements.

2. Terrorism is the greatest menace faced by the world today; very few countries are free from it. Critically examine its growth and the legal response to terrorism in India.

3. Police practices help to retain the same old dubious quality and the bad image of the police force continues its unmitigated hold on the public.' — Elaborate the statement with the help of suitable illustrations.

4. Reformation of offenders is the central theme of domiciliary treatment in correction institutions. Examine the important correctional institutions in the case of Juvenile delinquents.

5. Capital punishment is a subject of social and public concern and has given rise to endless debate without producing any conclusion. Mention the pros and cons of capital punishment with the help of case law.

6. The Probation of Offenders Act, 1958 provides for different modes of dealing with youthful and other offenders. — Elaborate.

**ಭಾಗ C** *6×15=90*

*ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ. ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

ಆತ್ಮಹತ್ಯೆಯ ಪ್ರಯತ್ನವು ಸಂವಿಧಾನದ 21ನೇ ಅನುಚ್ಛೇದದ ಉಲ್ಲಂಘನೆಯಾಗುವುದಿಲ್ಲ. ಕಾನೂನಿನ ತೀರ್ಪುಗಳ ಉದಾಹರಣೆಗಳೊಂದಿಗೆ ಈ ಹೇಳಿಕೆಯನ್ನು ವಿವರಿಸಿ.

ಭಯೋತ್ಪಾದನೆಯು ಜಗತ್ತು ಇಂದು ಎದುರಿಸುತ್ತಿರುವ ಅತಿದೊಡ್ಡ ಬೆದರಿಕೆಯಾಗಿದೆ. ಇದರಿಂದ ಮುಕ್ತವಾದ ದೇಶಗಳು ಇಲ್ಲವೆಂದೇ ಹೇಳಬಹುದು. ಭಾರತದಲ್ಲಿ ಭಯೋತ್ಪಾದನೆಯ ಬೆಳವಣಿಗೆ ಹಾಗೂ ಈ ಕುರಿತು ಕಾನೂನು ಯಾವ ರೀತಿ ಸ್ಪಂದಿಸಿದೆ ಎಂಬುದನ್ನು ವಿಮರ್ಶಾತ್ಮಕವಾಗಿ ಬರೆಯಿರಿ.

ಪೋಲೀಸರ ಕಾರ್ಯ ನಿರ್ವಹಣಾ ರೀತಿಯ ಬಗ್ಗೆ ಈಗಲೂ ಅದೇ ಸಂದೇಹಗಳು ಮತ್ತು ಕೆಟ್ಟ ಅಭಿಪ್ರಾಯಗಳು ಮುಂದುವರೆದುಕೊಂಡು ಬಂದಿವೆ. ಹೀಗಾಗಿ ಸಾರ್ವಜನಿಕರ ಮೇಲೆ ಅದರ ನಿಯಂತ್ರಣ ಅವ್ಯಾಹತವಾಗಿ ಮುಂದುವರೆಸಿದೆ. — ಈ ಹೇಳಿಕೆಯನ್ನು ಸೂಕ್ತ ಉದಾಹರಣೆಗಳೊಂದಿಗೆ ವಿವರಿಸಿ.

ಸುಧಾರಣಾ ಸಂಸ್ಥೆಗಳಲ್ಲಿ, ಮನೆಯಲ್ಲಿರುವಂತೆ ಅಪರಾಧಿಗಳನ್ನು ನೋಡಿಕೊಂಡು ಪರಿವರ್ತಿಸುವುದೇ ಮುಖ್ಯ ಆಶಯವಾಗಿದೆ. ಬಾಲಾಪರಾಧಿಗಳಿಗೆ ಸಂಬಂಧಿಸಿದಂತೆ ಮುಖ್ಯ ಸುಧಾರಣಾ ಸಂಸ್ಥೆಗಳು ಯಾವುವು ಎಂಬುದನ್ನು ವಿವರಿಸಿ.

ಮರಣ ದಂಡನೆಯು ಸಾಮಾಜಿಕ ಹಾಗೂ ಸಾರ್ವಜನಿಕ ಕಾಳಜಿಯ ವಿಷಯವಾಗಿದ್ದು, ಇದು ಯಾವಾಗಲೂ ಕೊನೆಯಿಲ್ಲದ ಚರ್ಚೆಯನ್ನು ಹುಟ್ಟು ಹಾಕುತ್ತದೆ. ಅದರೆ ಯಾವ ತೀರ್ಮಾನವೂ ಆಗುವುದಿಲ್ಲ. ತೀರ್ಪುಜನ್ಯ ಕಾನೂನಿನ ನೆರವಿನಿಂದ (Case law), ಮರಣ ದಂಡನೆಯ ಸಾಧಕ ಬಾಧಕಗಳೇನು ಎಂಬುದನ್ನು ತಿಳಿಸಿ.

'1956 ರ ಅಪರಾಧಿಗಳ ಪರಿವೀಕ್ಷಣಾ ಕಾಯಿದೆಯು, ಯುವಜನರು ಹಾಗೂ ಇನ್ನಿತರ ಅಪರಾಧಿಗಳನ್ನು ಬೇರೆ ಬೇರೆ ರೀತಿಗಳಲ್ಲಿ ಪರಿಶೀಲಿಸುವ ಅವಕಾಶ ಒದಗಿಸುತ್ತದೆ.' — ಇದನ್ನು ಕುರಿತು ವಿಸ್ತರಿಸಿ ಬರೆಯಿರಿ.

[Turn over

07/2

## PART D

*3×30=90*

*Answer any* ***three*** *of the following questions, each in not more than 300 words. Each question carries 30 marks.*

1. The custom of dowry is deep-rooted in Indian society, but over the years, it has turned into a social menace too entrenched and diabolical to be tackled by reformers and lawmakers. Explain, with suitable statistical information, to what extent the Dowry Prohibition Act, 1961 has been able to control the menace of dowry.

2. 'The punitive approach has its focus of attention on the danger caused to the victim and the danger posed to society; the criminal is treated as something incapable of being reformed.' — Analyse this statement in the light of various theories of crime.

3. Examine in detail the various committees appointed and the different enactments passed from time to time to reform the prison administration in India.

4. In the context of the problems of the Police flowing from out of certain provisions of the Cr. P.C. and the Indian Evidence Act, with respect to examination of scene of crime and investigation, mention the changes recommended by the Malimath Committee Report.

5. The new Juvenile Justice (Care and Protection of Children) Act, 2000 has made certain distinct and welcome changes in the administration of juvenile delinquency, as compared to the earlier Juvenile Justice Act, 1986. Explore and comment on these improvements.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿಯೊಂದು ಪ್ರಶ್ನೆಗೂ 30 ಅಂಕಗಳು.*

ವರದಕ್ಷಿಣೆ ಪದ್ಧತಿಯು, ಭಾರತೀಯ ಸಮಾಜದಲ್ಲಿ ಆಳವಾಗಿ ಬೇರೂರಿರುವಂಥದ್ದು. ಆದರೆ ಇತ್ತೀಚಿನ ವರ್ಷಗಳಲ್ಲಿ ಇದು ಸುಧಾರಕರು ಹಾಗೂ ಕಾನೂನು ಜನರಿಂದ ಬಗೆಹರಿಸಲು ಸಾಧ್ಯವಾಗದಷ್ಟು ಭದ್ರವಾಗಿ ಬೇರೂರಿದ ಹಾಗೂ ಭೀಕರ ರೂಪ ತಾಳಿದ ಸಾಮಾಜಿಕ ಅನಿಷ್ಟವಾಗಿದೆ. 1961 ರ ವರದಕ್ಷಿಣೆ ನಿಷೇಧ ಕಾಯಿದೆಯು ಎಷ್ಟರಮಟ್ಟಿಗೆ ಈ ಅನಿಷ್ಟವನ್ನು ನಿಯಂತ್ರಿಸಿದೆ ಎಂಬುದನ್ನು ಸೂಕ್ತ ಅಂಕಿ ಅಂಶಗಳ ಮಾಹಿತಿಯೊಂದಿಗೆ ವಿವರಿಸಿ.

ದಂಡನೆಯ ದೃಷ್ಟಿಕೋನವು ಬಲಿಯಾದ ವ್ಯಕ್ತಿಗೆ ಅಪಾಯ ಮತ್ತು ಸಮಾಜಕ್ಕೆ ಎದುರಾದ ಅಪಾಯಗಳ ಬಗ್ಗೆ ತನ್ನ ಗಮನ ಕೇಂದ್ರೀಕರಿಸುತ್ತದೆ. ಇದು ಅಪರಾಧಿಯನ್ನು ಸುಧಾರಿಸಲು ಅಸಾಧ್ಯವಾದ ವ್ಯಕ್ತಿ ಎಂದು ಪರಿಗಣಿಸುತ್ತದೆ. — ಅಪರಾಧವನ್ನು ಕುರಿತ ವಿವಿಧ ಸಿದ್ಧಾಂತಗಳ ಹಿನ್ನಲೆಯಲ್ಲಿ ಈ ಹೇಳಿಕೆಯನ್ನು ವಿಶ್ಲೇಷಿಸಿ.

ಭಾರತದಲ್ಲಿ ಜೈಲು ಆಡಳಿತದ ಸುಧಾರಣೆಗೆ ಸಂಬಂಧಿಸಿದಂತೆ ನೇಮಕವಾಗಿರುವ ವಿವಿಧ ಸಮಿತಿಗಳು ಹಾಗೂ ಕಾಲಾನುಕಾಲಕ್ಕೆ ಜಾರಿಗೆ ತರಲಾದ ವಿವಿಧ ಕಾಯಿದೆಗಳನ್ನು ಕುರಿತು ವಿವರವಾಗಿ ಪರಿಶೀಲಿಸಿ.

ಅಪರಾಧ ನಡೆದ ಸ್ಥಳದ ಪರಿಶೀಲನೆ ಮತ್ತು ತನಿಖೆಗೆ ಸಂಬಂಧಿಸಿದಂತೆ, ದಂಡ ಪ್ರಕ್ರಿಯಾ ಸಂಹಿತೆಯ ಕೆಲವೊಂದು ಉಪಬಂಧಗಳು ಹಾಗೂ ಭಾರತೀಯ ಸಾಕ್ಷ್ಯ ಕಾಯಿದೆಯ ಅಡಿಯಲ್ಲಿ ಪೊಲೀಸರು ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಮಳೀಮಠ್ ಸಮಿತಿ ವರದಿಯು ಈ ಸಂಬಂಧವಾಗಿ ಶಿಫಾರಸು ಮಾಡಿರುವ ಬದಲಾವಣೆಗಳನ್ನು ಕುರಿತು ಬರೆಯಿರಿ.

ಬಾಲಾಪರಾಧಗಳ ಆಡಳಿತ ವಿಷಯದಲ್ಲಿ, ಈ ಮೊದಲಿದ್ದ, 1986 ರ ಬಾಲಾಪರಾಧ ನ್ಯಾಯ ಕಾಯಿದೆಗೆ ಹೋಲಿಸಿದರೆ, 2000 ರ ನೂತನ ಬಾಲಾಪರಾಧ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯಿದೆಯು ಕೆಲವು ವಿಶಿಷ್ಟವಾದ ಹಾಗೂ ಸ್ವಾಗತಾರ್ಹವಾದ ಬದಲಾವಣೆಗಳನ್ನು ಮಾಡಿದೆ. ಈ ಸುಧಾರಣೆಗಳು ಯಾವುವು ಮತ್ತು ಅವುಗಳ ಸ್ವರೂಪವೇನು ? ವಿವರಿಸಿ.